ಬಸ್ಸುಗಳನ್ನು ಓಡಿಸಲು ಪರವಾನಗಿ ಕೊಡುವ ವಿಚಾರ ಸರ್ಕಾರದ ಯೋಜನೆಯಲ್ಲಿದೆಯೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಮುಂಜಾನೆ ಮತ್ತು ಸಾಯಂಕಾಲದ ಜನದಟ್ಟಣೆಯ ಸಮಯ ಕೆಲವು ಮಾರ್ಗಗಳಲ್ಲಿ ಜನರ ಲೋಡಿಂಗ್ ಆಗುವುದು ಕಂಡುಬಂದಿದೆ. ಇದು ಕಾನೂನು ಬಾಹಿರವಾಗಿರುತ್ತದೆ. ಆರ್ಥಿಕ ಮುಗ್ಗಟ್ಟು ಹಾಗೂ ನೇಮಕಾತಿ ಮೇಲಿನ ನಿರ್ಬಂಧಗಳಿಂದಾಗಿ 1989–90ರಿಂದ 1991–92ರ ಅವಧಿಯಲ್ಲಿ ಸಾರಿಗೆ ಕಾರ್ಯಾಚರಣೆಯಲ್ಲಿ ಇಳಿಮುಖವಾಯಿತು. ಆದಾಗ್ಯೂ ಇತ್ತೀಚೆಗೆ ಚಾಲಕ ನಿರ್ವಾಹಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ವಿಭಾಗಗಳಿಗೆ ತಿಳಿಸಲಾಯಿತು. ಓವರ್ ಲೋಡಿಂಗ್ ತಪ್ಪಿಸುವ ಸಲುವಾಗಿ ಏಪ್ರಿಲ್ 1992ರಿಂದ ಫೆಬ್ರವರಿ 1993ರ ಅವಧಿಯಲ್ಲಿ 322 ಅನುಸೂಚಿಗಳನ್ನು ಸೇರಿಸಲಾಯಿತು. ಮತ್ತು 1993–1994ನೇ ವರ್ಷಗಳಲ್ಲಿ ಇನ್ನೂ 1,000 ಅನುಸೂಚಿಗಳನ್ನು ಓಡಿಸುವ ಯೋಜನೆ ಇದೆ.

ಆ) ರಾಷ್ಟ್ರೀಕೃತವಾಗಿರುವ ಮಾರ್ಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾಕಷ್ಟು ಸಂಸಾರ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ರಾಷ್ಟ್ರೀಕರಣಗೊಳ್ಳದೇ ಇರುವ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳ ಮಾಲೀಕರು ಬಸ್ಸುಗಳನ್ನು ಓಡಿಸಲು ಮುಂದೆ ಬಂದಲ್ಲಿ ಸರ್ಕಾರವು ಅವರ ಮನವಿಯನ್ನು ಪರಿಶೀಲಿಸುವುದು.

ಹಾಸನದ ಕೆ.ಎಸ್.ಆರ್.ಟಿ.ಸಿ. ವತಿಯಿಂದ ಡ್ರೈವರ್ಸ್ ಟ್ರೈನಿಂಗ್ ಸಂಸ್ಥೆಯ ಪ್ರಾರಂಭ

1293(872): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಚಾಲಕರ ತರಬೇತಿ ಕೇಂದ್ರವನ್ನು ಪ್ರಾರಂಭಿಸಬೇಕೆಂಬ ಆಲೋಚನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಆಲೋಚನೆಯನ್ನು ಕಾರ್ಯಗತಗೊಳಿಸುವುದು ಯಾವಾಗ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು.

ಆ) ಮೇಲ್ಕಂಡ ತರಬೇತಿ ಕೇಂದ್ರದ ಕೆಲಸವನ್ನು 1993–94ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ರಾಜ್ಯ ಸರ್ಕಾರ, ಕೆ.ಎಸ್.ಆರ್.ಟಿ.ಸಿ.ಗೆ. ಬಂಡವಾಳ ಹೂಡಿರುವ ಬಗ್ಗೆ

1294(861): ಶ್ರೀ ಕೆ.ಹೆಚ್. ಹನುಮೇಗೌಡ,(ಹಾಸನ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹೂಡಿರುವ ಬಂಡವಾಳದ ಮೊತ್ತವೆಷ್ಟು ? ಕಳೆದ ಮೂರು ವರ್ಷಗಳಿಂದ ಸದರಿ ಸಂಸ್ಥೆಯು ಅನುಭವಿಸಿರುವ ನಷ್ಟವೆಷ್ಟು ? ನಷ್ಟವಾಗಲು ಕಾರಣಗಳೇನು ? ವರ್ಷವಾರು ಪ್ರತ್ಯೇಕ ವಿವರ ನೀಡುವುದು;